ಪ್ರವಾಸಿ ತಾಣಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ

112 (109) ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ): ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಸರ್ಕಾರ ಬೀದರ್ ಜಿಲ್ಲೆಯ ಪ್ರವಾಸೋದ್ಯಮಕ್ಕೆ ನೀಡಿರುವ ಅನುದಾನದ ಮೊತ್ತವೆಷ್ಟು ; (ವರ್ಷವಾರು ವಿವರಗಳನ್ನು ನೀಡುವುದು)

ಆ) ಕಳೆದ 3 ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಈವರೆವಿಗೂ ಎಷ್ಟು ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲಾಗಿದೆ ; (ವಿವರಗಳನ್ನು ನೀಡುವುದು)

ಇ) ಈವರೆವಿಗೂ ಅಭಿವೃದ್ಧಿಪಡಿಸಿರುವ ಪ್ರವಾಸಿ ತಾಣಗಳಿಗೆ ಕಳೆದ 3 ವರ್ಷಗಳಲ್ಲಿ ವೆಚ್ಚ ಮಾಡಿರುವ ಮೊತ್ತವೆಷ್ಟು ; (ವರ್ಷ ಮತ್ತು ಪ್ರವಾಸಿ ತಾಣಗಳವಾರು ವಿವರಗಳನ್ನು ನೀಡುವುದು)

ಈ) ಕಳೆದ 3 ವರ್ಷಗಳಲ್ಲಿ ಬೀದರ್ ಜಿಲ್ಲೆಯ ಬೀದರ್ ದಕ್ಷಿಣ ತಾಲ್ಲೂಕಿನ ಪ್ರವಾಸಿ ತಾಣಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು ; (ವರ್ಷವಾರು ವಿವರಗಳನ್ನು ನೀಡುವುದು)

ಉ) ಬೀದರ್ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರವಾಸಿ ತಾಣಗಳನ್ನು ಗುರುತಿಸಲಾಗಿದೆ ; (ವಿವರಗಳನ್ನು ನೀಡುವುದು) ?

ಶ್ರೀ ಜಿ. ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು):

ಅ) ಕಳೆದ 3 ವರ್ಷಗಳಲ್ಲಿ ಬೀದರ್ ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಒದಗಿಸಿರುವ ಅನುದಾನದ ವಿವರಗಳು ಈ ಕೆಳಗಿನಂತಿವೆ.

2007–08	–	ರೂ. 200.00 ಲಕ್ಷಗಳು
2008–09	–	ರೂ. 3500.00 ಲಕ್ಷಗಳು
2009–10	–	ರೂ. 4125.00 ಲಕ್ಷಗಳು
ಒಟ್ಟು	–	**ರೂ. 7825.00 ಲಕ್ಷಗಳು**

ಆ) ಕಳೆದ 3 ವರ್ಷಗಳಿಂದ ಬೀದರ್ ಜಿಲ್ಲೆಯಲ್ಲಿ 7 ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ಕೈಗೆತ್ತಿಕೊಳ್ಳಲಾಗಿದೆ. ಅವುಗಳ ವಿವರ ಈ ಕೆಳಕಂಡಂತಿವೆ.

1. ಬೀದರ್ ನಗರ
2. ಚೌಕಾಂಡಿ ಮತ್ತು ಅಸ್ಟೂರು ಟೂಂಬ್ಸ್
3. ವಿಲಾಸಪುರ ಟ್ಯಾಂಕ್
4. ಮಹಿಭಾಗ ಜನವಾಡ
5. ನಾನಕ್ ಝರಾ
6. ಪಾಪನಾಶ ಶಿವ ದೇವಾಲಯ
7. ಬೀದರ್ ಕೋಟೆ ಧ್ವನಿ ಮತ್ತು ಬೆಳಕಿನ ಯೋಜನೆ

ಇ) 2007–08ನೇ ಸಾಲಿನಲ್ಲಿ ಒಟ್ಟು ರೂ. 200.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆರವರಿಗೆ ಬಿಡುಗಡೆ ಮಾಡಲಾಗಿದ್ದು, ಇದರಲ್ಲಿ ರೂ. 100.00 ಲಕ್ಷಗಳ ವೆಚ್ಚದಲ್ಲಿ ಪಾಪನಾಶಶಿವ ದೇವಾಲಯದ ಬಳಿ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಅಲ್ಲದೆ ರೂ. 100.00 ಲಕ್ಷಗಳಲ್ಲಿ ಬೀದರ್‌ನ ಪ್ರವಾಸಿ ತಾಣಗಳ ಬಳಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾಗಿದೆ.

2008–09ನೇ ಸಾಲಿನಲ್ಲಿ ಒಟ್ಟು ರೂ. 3500.00 ಲಕ್ಷಗಳನ್ನು ಗುರು ತಾ ಗದ್ದಿ ಕಾರ್ಯಕ್ರಮದ ಅಂಗವಾಗಿ ಬೀದರ್ ನಗರದ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆರವರಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳು ಪ್ರಗತಿಯಲ್ಲಿವೆ.

2009–10ನೇ ಸಾಲಿನಲ್ಲಿ ರೂ. 4125.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು ಇದರಲ್ಲಿ ರೂ. 4000.00 ಲಕ್ಷಗಳನ್ನು ಗುರು ತಾ ಗದ್ದಿ ಕಾರ್ಯಕ್ರಮಗಳ ಅಂಗವಾಗಿ ಮುಂದುವರಿದ ಯೋಜನೆಗಳ ಕಾಮಗಾರಿಗಳಿಗಾಗಿ ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆರವರಿಗೆ ಬಿಡುಗಡೆ ಮಾಡಲಾಗಿದೆ. ಅಲ್ಲದೆ ತಲಾ ರೂ. 12.50 ಲಕ್ಷಗಳ ವೆಚ್ಚದಲ್ಲಿ ಬೀದರ್ ಜಿಲ್ಲೆಯ ಮಹಿಭಾಗ ಜನವಾಡ ಮತ್ತು ನಾನಕ್‌ಝರಾ ಗುರುದ್ವಾರಗಳ ಬಳಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಬೀದರ್ ಕೋಟೆಗೆ ಧ್ವನಿ ಮತ್ತು ಬೆಳಕಿನ ಯೋಜನೆ ಅಳವಡಿಸಲು ಕ್ರಮವಹಿಸಲಾಗಿದ್ದು ಇದರ ಸಂಬಂಧ ರೂ. 100.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಈ) ಬೀದರ್ ದಕ್ಷಿಣ ತಾಲ್ಲೂಕಿನ ಪ್ರವಾಸಿ ತಾಣಗಳಿಗೆ ಇಲಾಖೆಯಿಂದ ಕಳೆದ 3 ವರ್ಷಗಳಲ್ಲಿ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

ಉ) ಬೀದರ್ ನಗರದಲ್ಲಿ ಗುರುತಿಸಲಾಗಿರುವ ಪ್ರವಾಸಿ ಕೇಂದ್ರಗಳು

1. ಬೀದರ್ ಕೋಟೆ
2. ಮಹಮದ್ ಗವಾನ್ ಮದರಸ
3. ನಾನಕ್‌ಝರ
4. ನರಸಿಂಹಜಾರಿಣಿ

ಬೀದರ್ ಗ್ರಾಮಾಂತರ ಪ್ರದೇಶದಲ್ಲಿ ಗುರುತಿಸಲಾಗಿರುವ ಪ್ರವಾಸಿ ಕೇಂದ್ರಗಳು.

1. ಚೌಕಾಂಡಿ
2. ಅಸ್ತೂರ ಟೂಂಬ್ಸ್
3. ವಿಲಾಸಪುರ ಕೆರೆ
4. ಪಾಪನಾಶ ಶಿವ ದೇವಾಲಯ

ಯುವ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವುದು

114 (178) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ಮತಕ್ಷೇತ್ರದಲ್ಲಿ ಯುವಜನ ಸೇವಾ ಇಲಾಖೆಯಿಂದ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ;

ಆ) ಇದಕ್ಕಾಗಿ ಕಳೆದ ಎರಡೂವರೆ ವರ್ಷಗಳಲ್ಲಿ ವೆಚ್ಚ ಮಾಡಿರುವ ಹಣವೆಷ್ಟು;

ಇ) ಈ ಕ್ಷೇತ್ರದಲ್ಲಿರುವ ಯುವ ಕ್ರೀಡಾಪಟುಗಳಿಗೆ ಉತ್ತೇಜನ ನೀಡಲು ಮತ್ತು ಇವರುಗಳನ್ನು ಪ್ರೋತ್ಸಾಹಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ; (ಪೂರ್ಣ ವಿವರಗಳನ್ನು ಒದಗಿಸುವುದು)?

ಶ್ರೀ ಜಿ. ಜನಾರ್ದನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು):

ಅ) ಬಸವಕಲ್ಯಾಣ ಪಟ್ಟಣದಲ್ಲಿ ತಾಲೂಕು ಕ್ರೀಡಾಂಗಣ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದೆ. ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ್ ಯೋಜನೆಯಡಿ ಬಸವಕಲ್ಯಾಣ ತಾಲ್ಲೂಕಿನಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಗ್ರಾಮ ಪಂಚಾಯತ್ ಮಟ್ಟದ ಪೈಕಾ ಕೇಂದ್ರಗಳನ್ನು 2008–09ರಲ್ಲಿ ಸ್ಥಾಪಿಸಲಾಗಿದೆ.